ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	901
ಸದಸ್ಯರ ಹೆಸರು	:	ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವವರು	:	ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	:	21-12-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಬೀದರ್ ಜಿಲ್ಲೆ ಬಸವಕಲ್ಯಾಣ ಹಾಗೂ ಹುಲಸೂರು ತಾಲ್ಲೂಕುಗಳಲ್ಲಿ ಸ್ವಂತ ಅಂಗನವಾಡಿ ಕಟ್ಟಡಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕಟ್ಟಡ ನಿರ್ಮಾಣಕ್ಕೆ ಕಳೆದ 2 ವರ್ಷಗಳಿಂದ ಬಿಡುಗಡೆಯಾದ ಅನುದಾನವೆಷ್ಟು;	ಬಸವಕಲ್ಯಾಣ ತಾಲ್ಲೂಕಿನಲ್ಲಿ ಒಟ್ಟು 349 ಅಂಗನವಾಡಿ ಕೇಂದ್ರಗಳಿವೆ. ಇವುಗಳಲ್ಲಿ 263 ಕೇಂದ್ರಗಳು ಸ್ವಂತ ಕಟ್ಟಡದಲ್ಲಿಯೂ, 09 ಕೇಂದ್ರಗಳು ಸಮುದಾಯ ಭವನದಲ್ಲಿಯೂ, 08 ಕೇಂದ್ರಗಳು ಶಾಲಾ ಕಟ್ಟಡಗಳಲ್ಲಿಯೂ, 05 ಕೇಂದ್ರಗಳು ಇತರೆ ಕಟ್ಟಡಗಳಲ್ಲಿಯೂ ಹಾಗೂ 64 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿಯೂ ಕಾರ್ಯನಿರ್ವಹಿಸುತ್ತಿವೆ. ಹುಲಸೂರು ತಾಲ್ಲೂಕಿನಲ್ಲಿ 62 ಅಂಗನವಾಡಿ ಕೇಂದ್ರಗಳಿವೆ. ಇವುಗಳಲ್ಲಿ 44 ಕೇಂದ್ರಗಳು ಸ್ವಂತ ಕಟ್ಟಡಗಳಲ್ಲಿಯೂ, 02 ಕೇಂದ್ರಗಳು ಪಂಚಾಯತಿ ಕಟ್ಟಡಗಳಲ್ಲಿಯೂ, 02 ಕೇಂದ್ರಗಳು ಶಾಲಾ ಕಟ್ಟಡಗಳಲ್ಲಿಯೂ ಹಾಗೂ 14 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿಯೂ ಕಾರ್ಯನಿರ್ವಹಿಸುತ್ತಿವೆ. ಕಳೆದ 02 ವರ್ಷಗಳಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ 12 ಕೇಂದ್ರಗಳು ಮತ್ತು ಹುಲಸೂರು ತಾಲ್ಲೂಕಿನಲ್ಲಿ 03 ಕೇಂದ್ರಗಳು, ಒಟ್ಟು 15 ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಟ್ಟಡ ನಿರ್ಮಾಣಕ್ಕಾಗಿ ಒಟ್ಟು ರೂ 227.00 ಲಕ್ಷಗಳ ಅನುದಾನ ಬಿಡುಗಡೆ ಆಗಿರುತ್ತದೆ. ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಆ.	ಈ ಭಾಗದ ಅಂಗನವಾಡಿ ಮಕ್ಕಳಿಗೆ ನೀಡುತ್ತಿರುವ ಪೌಷ್ಠಿಕ ಆಹಾರಗಳು ಯಾವುವು; ಯಾವ ಪ್ರಮಾಣದಲ್ಲಿ ನೀಡಲಾಗುತ್ತಿದೆ; (ತಾಲ್ಲೂಕುವಾರು ವಿವರಗಳನ್ನು ನೀಡುವುದು)	ಈ ಭಾಗದ ಅಂಗನವಾಡಿ ಮಕ್ಕಳಿಗೆ ನೀಡುತ್ತಿರುವ ಪೌಷ್ಠಿಕ ಆಹಾರಗಳು ಮತ್ತು ಪ್ರಮಾಣಗಳ ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.

ಇ.	ಈ ಅಂಗನವಾಡಿಗಳಲ್ಲಿ ಸ್ವಚ್ಛತೆಯನ್ನು ಕಾಪಾಡದಿರುವುದು ಹಾಗೂ ಆಹಾರ ಧಾನ್ಯಗಳನ್ನು ಸರಿಯಾಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ	ಅಂಗನವಾಡಿ ಕೇಂದ್ರಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲಾಗುತ್ತಿದೆ. ಮುಂದುವರೆದು, ಸದರಿ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಆಹಾರ ಧಾನ್ಯಗಳನ್ನು ಸರಿಯಾಗಿ ನೀಡಲಾಗುತ್ತಿದೆ.

ಸಂಖ್ಯೆ: ಮಮಇ 315 ಐಸಿಡಿ 2021

Halappa B

(ಆಚಾರ ಹಾಲಪ್ಪ ಬಸಪ್ಪ)
ಮಾನ್ಯ ಗಣಿ ಮತ್ತು ಭೂ ವಿಜ್ಞಾನ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 901 ಕ್ಕೆ ಒದಗಿಸಲಾದ

ಅನುಬಂಧ-1

ಬಸವಕಲ್ಯಾಣ ಹಾಗೂ ಹುಲಸೂರ ತಾಲ್ಲೂಕುಗಳಿಗೆ ಕಳೆದ 2 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

ವರ್ಷ	ತಾಲ್ಲೂಕು	KKRDB		SDP		ಒಟ್ಟು	
		ಭೌತಿಕ	ಅನುದಾನ	ಭೌತಿಕ	ಅನುದಾನ	ಭೌತಿಕ	ಅನುದಾನ
2019-20	ಬಸವಕಲ್ಯಾಣ	06	90.00	04	72.00	10	162.00
2020-21		01	15.00	01	10.00	2	25.00
2019-20	ಹುಲಸೂರ	0	0	0	0	0	0
2020-21		01	15.00	02	20.00	3	35.00
ಒಟ್ಟು		**8**	**120.00**	**7**	**102.00**	**15**	**222.00**

ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ವಿಜಯ್‌ಸಿಂಗ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 901 ಕ್ಕೆ ಒದಗಿಸಲಾದ ಅನುಬಂಧ-2

ಬಸವಕಲ್ಯಾಣ ಹಾಗೂ ಹುಲಸೂರು ತಾಲ್ಲೂಕಿನ ಅಂಗನವಾಡಿ ಕೇಂದ್ರದ ಮಕ್ಕಳಿಗೆ ನೀಡುತ್ತಿರುವ ಪೌಷ್ಠಿಕ ಆಹಾರ ಹಾಗೂ ಪ್ರಮಾಣಗಳ ವಿವರ.

ಕ್ರ. ಸಂ	ಆಹಾರ ಪದಾರ್ಥದ ಹೆಸರು	ಸಾಧಾರಣ ಮಕ್ಕಳಿಗೆ ನೀಡುವ ಆಹಾರ (ಗ್ರಾಂ.ಗಳಲ್ಲಿ / ಮಾಹೆಯಾನ)			ತೀವ್ರ ಅಪೌಷ್ಠಿಕ ಮಕ್ಕಳಿಗೆ ನೀಡುವ ಆಹಾರ (ಗ್ರಾಂ.ಗಳಲ್ಲಿ/ ಮಾಹೆಯಾನ)	
		6 ತಿಂಗಳಿಂದ 3 ವರ್ಷದ ಮಕ್ಕಳು	3 ರಿಂದ 6 ವರ್ಷದ ಮಕ್ಕಳು	ಗರ್ಭಿಣಿ, ಬಾಣಂತಿ, ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ	6ತಿಂಗಳಿಂದ 3 ವರ್ಷದ ಮಕ್ಕಳು	3 ರಿಂದ 6 ವರ್ಷದ ಮಕ್ಕಳು
1	ನ್ಯೂಟ್ರಿಮಿಕ್ಸ್ (ಪುಷ್ಠಿ)	3625	–	–	5375	–
2	ಹಾಲಿನಪುಡಿ	375	375	250	375	375
3	ಸಕ್ಕರೆ	250	250	200	250	250
4	ಬೆಲ್ಲ	–	300	250	–	644
5	ಶೇಂಗಾ	–	225	450	–	450
6	ಎಣ್ಣೆ	–	98	200	–	122
7	ಅಕ್ಕಿ	–	3850	3750	–	3995
8	ತೊಗರಿಬೇಳೆ	–	108	400	–	288
9	ಮೆಣಸಿನಕಾಯಿ	–	87	175	–	87
10	ಸಾಂಬಾರ ಮಸಾಲಾ	–	74	200	–	111
11	ಅಯೋಡಿನ್ ಉಪ್ಪು	–	83	200	–	96
12	ಸಾಸಿವೆ	–	49	75	–	49
13	ಅರಶಿನಪುಡಿ	–	37	100	–	37
14	ಹೆಸರುಕಾಳು	–	126	–	–	144
15	ಅಲಸಂದೆಕಾಳು	–	99	–	–	168
16	ಹೆಸರುಬೇಳೆ	–	208	–	–	351
17	ಗೋಧಿರವಾ	–	400	–	–	440
18	ಮೊಟ್ಟೆ	ಸಾಧಾರಣ ಮಕ್ಕಳಿಗೆ 12	ಸಾಮಾನ್ಯ 08, ಸಾಧಾರಣ 20	25	12	20